

ಡಾ.ವಿನೋದ ಛೆಬ್ಬಿ

**ಕಾಮಕೂಟದಲ್ಲಿ ಆರಾಧನೆಯ ಭಾವವನ್ನು ಅಳವಡಿಸಿಕೊಂಡರೆ ಅಧ್ಯಾತ್ಮದತ್ತ ಜೋಡಿಪಯಣ ಶುರುವಾಗುತ್ತದೆ.**

# 295: ಹೊಸ ದಾರಿ - 35

ನಾವೇಕೆ ಕಾಮಕೂಟ ನಡೆಸುತ್ತೇವೆ ಎಂಬ ಜಿಜ್ಞಾಸೆಯ ಕಡೆಯ ಹಂತಕ್ಕೆ ಬರುತ್ತಿದ್ದೇವೆ. ಈಸಲ ಕೂಟದ ಕೊನೆಯಲ್ಲಿ ಹಾಗೂ ಕೂಟದಾಚೆ ಏನಿದೆ ಎನ್ನುವುದನ್ನು ನೋಡೋಣ. ಸನ್ನಿವೇಶ: ಅವಿರತ ಪ್ರಯತ್ನದಿಂದ, ಹಾಗೂ ಸಾಕಷ್ಟು ಕಾಲ ದಾಂಪತ್ಯ ಚಿಕಿತ್ಸೆಯಿಂದ ಮಾಯಾ–ಮನೋಜ ಅವರ ನಡುವೆ ಪ್ರೀತಿ, ಅನ್ಯೋನ್ಯತೆ ಉಕ್ಕಿ ಹರಿಯುತ್ತಿದೆ. ಅಂಥದೊಂದು ನಡುರಾತ್ರಿಯ ಸ್ತಬ್ಧತೆಯಲ್ಲಿ ನಗ್ನರಾಗಿ ಕುಳಿತ ಭಂಗಿಯಲ್ಲಿ ಒಬ್ಬರೊಳಗೊಬ್ಬರು ಸೇರಿಕೊಂಡಿದ್ದಾರೆ. ಆಗ ಮನೋಜನ ಮೈಯಲ್ಲಿ ಹೇಳಲಾಗದ ಒಳಾನುಭವ (interoception) ಆಗುತ್ತದೆ. ಮನಸ್ಸು, ಮೈಚಲನೆ ಥಟ್ಟನೆ ನಿಲ್ಲುತ್ತವೆ. ಸ್ಖಲನವಾಗುವ ಮುಂಚೆ ನಿಲ್ಲಿಸಿದ್ದು ಏಕೆಂದು ತಿಳಿಯದೆ ಮಾಯಾ ಪ್ರಶ್ನಾರ್ಥಕವಾಗಿ ನೋಡುತ್ತಾಳೆ. ಇಬ್ಬರೂ ಮೌನದಲ್ಲಿ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಾರೆ. ಅವಳ ಒಳಾನುಭವ ಜಾಗೃತವಾಗುತ್ತ, ಅವನದಕ್ಕೆ ಸ್ಪಂದಿಸುತ್ತಿದೆ. ಮೈಗಳು ನವಿರಾಡುತ್ತಿವೆ... ಈಗ ಭಾವಪ್ರಾಪ್ತಿಯ (orgasm) ಬದಲು ಮತ್ತಿನ್ನೇನೋ ಅನುಭವ ಆಗುತ್ತಿದೆ. ಇದು ಭಾವಪ್ರಾಪ್ತಿಯಂತೆ ಬಂದು ಮುಟ್ಟಿ ಮುಳುಗಿಸಿ ಹೋಗುವ ಅಲೆಯಲ್ಲ; ಬಂದುಬಿಟ್ಟು ಮುಳುಗಿಸಿ ಒಳಗೂ ಹೊರಗೂ ಹಿತವಾಗಿ ಅವರಿಸಿಕೊಳ್ಳುವಂಥದ್ದು. ಒಬ್ಬರಿಗೆ ಕೊಡುವಂಥದ್ದು ಅಥವಾ ಇನ್ನೊಬ್ಬರಿಂದ ಪಡೆಯುವಂಥದ್ದು ಅಲ್ಲ; ಇನ್ನೊಬ್ಬರಲ್ಲಿ ವಿಲೀನವಾದಾಗ 'ತನ್ನತನ'ಕ್ಕಾಗುವ ಸ್ಥಿತಿ. 'ನಾನು' ಎನ್ನುವುದರಿಂದ ಕಳಚಿಕೊಂಡು 'ಅರಿವು' ಮಾತ್ರ ಇರುವ ಸ್ಥಿತಿ. ಇದೇ ಸ್ಥಿತಿಯಲ್ಲಿ ಕಾಲ ಸ್ತಬ್ಧವಾದಂತೆ ಕುಳಿತಲ್ಲೇ ಅನಂತರಾಗಿಬಿಡುತ್ತಾರೆ. ಅಲ್ಲಿಂದ ಭಾವಪ್ರಾಪ್ತಿಯತ್ತ ಸಾಗಬೇಕು ಎನ್ನಿಸುವುದಿಲ್ಲ. ಯಾಕೆ? ಇದರಿಂದ ಕದಲಲು ಇಷ್ಟವಿಲ್ಲ. ಅದೆಷ್ಟು ಹೊತ್ತು ಹೀಗೆ ಗೊತ್ತಿಲ್ಲ. ಎಲ್ಲವೂ ಹಿತಕರ, ಅಸ್ಪಷ್ಟ... ಇಲ್ಲೇನು ನಡೆಯುತ್ತಿದೆ?

**ಅಧ್ಯಾತ್ಮಿಕ ಅನುಭೂತಿ:** ದೇವರ ಭಜನೆ, ಸಂಗೀತದ ಶ್ರವಣ, ಮಗುವಿಗೆ ಸ್ತನ್ಯಪಾನ, ಆತ್ಮೀಯರೊಡನೆ ಕಾಮಕೂಟ – ಇವುಗಳಲ್ಲಿ ಒಂದು ಸಾಮ್ಯವಿದೆ. ಇಲ್ಲೆಲ್ಲ ಭಾವಾವೇಶವು ತುತ್ತತುದಿ ಮುಟ್ಟುವ ಕಾಲದಲ್ಲಿ ಶರೀರದಲ್ಲಿ ಆಕ್ಸಿಟೋಸಿನ್ ಹಾರ್ಮೋನ್ ಬಿಡುಗಡೆಯಾಗುತ್ತದೆ. ಅದರಿಂದ ಚರಮ ತೃಪ್ತಿ, ನಂತರ ಪರಮಶಾಂತಿಯ ಅನುಭೂತಿ ಆಗುತ್ತದೆ. ಈ ಅನುಭೂತಿಯನ್ನು ಕಾಮಕೂಟದಲ್ಲೂ ತರಿಸಿಕೊಳ್ಳಲು ಸಾಧ್ಯವಿದೆ! (ದೇವರನ್ನು ಒಲಿಸಿಕೊಳ್ಳುವುದು ಬಲುಕಷ್ಟ. ಆದರೆ ಕೂಟಕ್ಕಾಗಿ ಸಂಗಾತಿಯನ್ನು ಒಲಿಸಿಕೊಳ್ಳುವುದು ಸುಲಭ!) ಅರ್ಥವತ್ತಾದ ಬಾಂಧವ್ಯವನ್ನು ಬೆಳೆಸಿಕೊಂಡ ಆತ್ಮೀಯರಿಬ್ಬರು ಕಾಮಕ್ರಿಯೆಯಲ್ಲಿ ತೊಡಗಿ ತಲ್ಲೀನರಾಗುತ್ತ, ಲೀನರಾಗುತ್ತ ಹೋದಂತೆ ಕ್ರಮೇಣ ನಾನು ನೀನು ಎನ್ನುವ ಮಿತಿಮೇರೆಗಳು ಮಾಯವಾಗಿ ಯಾರೊಳಗೆ ಯಾರಿದ್ದಾರೆ ಎನ್ನುವುದು ಅರಿವಿಗೇ ಬರುವುದಿಲ್ಲ. ಕೇವಲ ಅರಿವು ಮಾತ್ರ ಉಳಿಯುತ್ತದೆ. ಪ್ರಪಂಚ ಇಲ್ಲವಾದಂತೆ, ಸಮಯ ನಿಂತಂತೆ, ಸ್ತಬ್ಧಸ್ಥಿತಿ ನಿರಂತರವಾದಂತೆ ಅನಿಸುತ್ತದೆ. ಇದೊಂದು ಅಧ್ಯಾತ್ಮಿಕ ಅನುಭೂತಿ. ಇಂಥದೊಂದು ಕೂಟದ ನಂತರ ಶರೀರವು ಕಾಂತಿಯಿಂದ ಬೆಳಗುತ್ತದೆ. ಮೈಯೊಳಗೆ ವಿಲಕ್ಷಣ ಶಾಂತಶಕ್ತಿಯ ಸಂಚಾರವಾಗುತ್ತದೆ. ಹೀಗೆ ತನ್ನ ಮೈಯೊಳಗೆ ಹುಟ್ಟುವ ಒಳಾನುಭವವು ಸಂಗಾತಿಯ ಮೈಯಲ್ಲೂ ಪಸರಿಸುತ್ತ ಅನಿರ್ವಚನೀಯ ದೈವಿಕ ಅನುಭೂತಿ ಆಗುತ್ತದೆ. ಇಲ್ಲಾಗುವ ಸಂತೃಪ್ತಿ ಎಷ್ಟೊಂದು ಉತ್ಕೃಷ್ಟವಾಗಿರುತ್ತದೆ ಎಂದರೆ ಭಾವಪ್ರಾಪ್ತಿಯ ಅಗತ್ಯ ಅನ್ನಿಸುವುದಿಲ್ಲ.

ಮೇಲಿನ ವಿವರ ಸರಿಯಾಗಿ ಅರ್ಥವಾಗದಿರುವವರಿಗೆ ಈ ಉದಾಹರಣೆ: ಒಂದೇ ಧಾರ್ಮಿಕ ನಂಬಿಕೆಗಳನ್ನು ಇಟ್ಟುಕೊಂಡ, ಆದರೆ ಅನ್ಯೋನ್ಯತೆಯಿಲ್ಲದ ವಯಸ್ಸಾದ ದಂಪತಿಯನ್ನು ತೆಗೆದುಕೊಳ್ಳಿ. ಅವರು ದೂರದ ಧಾರ್ಮಿಕ ಸ್ಥಳಕ್ಕೆ ಕಷ್ಟಪಟ್ಟು ಪ್ರಯಾಣಿಸಿ, ಆರಾಧಿಸಿ ಹಿಂತಿರುಗುತ್ತಾರೆ. ಇಬ್ಬರೂ ಒಂದೇ ರೀತಿರಿವಾಜುಗಳನ್ನು ಒಟ್ಟಾಗಿ ಅನುಸರಿಸಿದರೂ ಅವರ ಭಾವಗಳು ಒಟ್ಟಾಗದೆ ಉಳಿಯುವ ಸಾಧ್ಯತೆಯಿದೆ. ಅಂತೆಯೇ ಕಾಮಕೂಟದಲ್ಲಿ ಅವರವರ ಒಳಾನುಭವವು ಬೇರೆಯಾಗಿದ್ದು, ಅವರನ್ನು ಜೋಡಿಸಲಾರದು. ಇದಕ್ಕೆ ವ್ಯತಿರಿಕ್ತವಾಗಿ, ದಂಪತಿಯಲ್ಲಿ ಅನ್ಯೋನ್ಯತೆ ಇದ್ದರೆ? ಅಧ್ಯಾತ್ಮಿಕ ಶಕ್ತಿಯ ಸನ್ನಿಧಿಯಲ್ಲಿ ಅಹಮಿಕೆ ಕಳೆದುಕೊಂಡು ಏಕಭಾವದಿಂದ ಒಂದಾಗುವಂತೆ ಕಾಮಕೂಟದಲ್ಲೂ ಅಹಮಿಕೆ ಕಳೆದುಕೊಂಡು ಒಂದಾಗುತ್ತಾರೆ. ಹೊಂದುವ ಒಳಾನುಭವದಲ್ಲಿ ತನ್ನತನವನ್ನು ಕಳೆದುಕೊಂಡು ಲೀನವಾಗುತ್ತ ಅರಿವನ್ನು ಮಾತ್ರ ಉಳಿಸಿಕೊಳ್ಳುತ್ತಾರೆ. ಇನ್ನೊಂದು ರೀತಿ ಹೇಳುವುದಾದರೆ, ಅನ್ಯೋನ್ಯತೆಯ ಕಾಮಕೂಟದಲ್ಲಿ ಆರಾಧನೆಯ ಭಾವವನ್ನು ಅಳವಡಿಸಿಕೊಂಡರೆ ಅಧ್ಯಾತ್ಮದತ್ತ ಪಯಣ ಶುರುವಾಗುತ್ತದೆ. ಇಲ್ಲಿ ಸಂಗಾತಿಗಳ ಸಮನ್ವಯತೆ ಮುಖ್ಯವಾಗುತ್ತದೆಯೇ ವಿನಃ ದೇಹಗತವಾದ ಕಾಮತೃಪ್ತಿಯಲ್ಲ. ಭಕ್ತಿಭಾವದಿಂದ ಒಬ್ಬರು ವಿಕಸನಗೊಳ್ಳುವುದಾದರೆ ಕಾಮಭಾವದಿಂದ ಇಬ್ಬರೂ ವಿಕಸನಗೊಳ್ಳಬಹುದು! ಇದಕ್ಕೆ ಪುಷ್ಟಿಕೊಡುವಂತೆ, ಇಪ್ಪತ್ತು ವರ್ಷಕ್ಕೂ ಹೆಚ್ಚುಕಾಲ ತೃಪ್ತಿಕರ ಕಾಮಕ್ರಿಯೆಯಲ್ಲಿ ಒಳಗೊಳ್ಳುತ್ತಿರುವ ಸಂಗಾತಿಗಳ ಮುಖಚರ್ಯೆ ಒಂದೇ ಆಗುತ್ತದೆ ಎಂದು ಸಮೀಕ್ಷೆ ತಿಳಿಸುತ್ತದೆ.

**ವಿವಿಧ ಭಾವ–ಅರ್ಥ–ಅನುಭವ:** ಕೂಡುವ ಸಂಗಾತಿಯನ್ನು, ಹಾಗೂ ಕೂಡುವಾಗ ಇರುವ ಮನೋಭಾವವನ್ನು ಅನುಸರಿಸಿ ಕೂಟದ ಅನುಭವವೂ ಭಿನ್ನವಾಗುತ್ತದೆ. ಉದಾಹರಣೆಗೆ, ಒಬ್ಬರೊಡನೆ ಆಕರ್ಷಣೆಯ ಚೆಲ್ಲಾಟ ಎನಿಸಿದರೆ ಇನ್ನೊಬ್ಬರೊಡನೆ ನಿಷ್ಠೆಯ ಒಡನಾಟ ಎನಿಸುತ್ತದೆ. ಒಬ್ಬರೊಡನೆ ಪ್ರಕ್ಷುಬ್ಧ ಸಮುದ್ರದ ತೆರೆಗಳ ಅನುಭವವಾದರೆ ಇನ್ನೊಬ್ಬರೊಡನೆ ಶಾಂತ ಸರೋವರ ಅನಿಸುತ್ತದೆ. ದೀರ್ಘ ವಿರಹದ ನಂತರ ಕೂಡುವ ಸಂಗಾತಿಗಳು ಕಂಡುಕೊಳ್ಳುವ ಅರ್ಥವು ದೀರ್ಘ ಜಗಳದ ನಂತರ ಕೂಡುವ ಸಂಗಾತಿಗಳಿಂದ ಬೇರೆಯಾಗಿರುತ್ತದೆ. ಮಗು ಬೇಕೆಂದು ನಡೆಸುವ ಕೂಟಕ್ಕಿಂತ ಮಗುವಾದ ನಂತರ ನಡೆಸುವ ಕೂಟವು ಭಿನ್ನವಾಗಿರುತ್ತದೆ. ಒಬ್ಬರೊಡನೆ ರೋಚಕತೆ, ಇನ್ನೊಬ್ಬರೊಡನೆ ಜವಾಬ್ದಾರಿಯ ಪೂರೈಕೆ, ಮೂರನೆಯವರೊಡನೆ ಸಾದೃಶ್ಯವನ್ನು ಹಂಚಿಕೊಳ್ಳುವಿಕೆ, ನಾಲ್ಕನೆಯವರೊಡನೆ ದೈವಿಕ ಸಂಬಂಧ ಆಗಬಹುದು. ಇಲ್ಲೊಬ್ಬಳು ತನಗಿಂತ ಮೂವತ್ತು ವರ್ಷ ಹಿರಿಯ ಸಹೃದಯಿಯೊಡನೆ ಕೂಟ ಬಯಸುತ್ತಾಳೆ. ಯಾಕೆ? ಹದಿವಯಸ್ಸಿನಲ್ಲಿ ಪುಳಕ ಕೊಟ್ಟಿದ್ದ ಅವನೊಡನೆ ಬೆರೆಯುವುದು ಪ್ರಬುದ್ಧಳಾದ ನಂತರ ಸಂಗಾತಿಯೊಡನೆ ಬೆರೆಯುವುದಕ್ಕಿಂತ ಪೂರ್ತಿ ಭಿನ್ನವಾದ ಅರ್ಥ ಕೊಡುತ್ತದೆ. ಒಬ್ಬರು ವ್ಯಾವಹಾರಿಕತೆಯಿಂದ ಕೂಡಿ ಸಂಬಂಧವನ್ನು ಉಳಿಸಿಕೊಳ್ಳಲು ನೋಡಿದರೆ, ಮತ್ತೊಬ್ಬರು ದಾಂಪತ್ಯದ ಆಘಾತದಿಂದ ಖಿನ್ನತೆಗೆ ಜಾರುವುದರಿಂದ ತಪ್ಪಿಸಿಕೊಳ್ಳಲು ಆಫೀಸಿನ ಪ್ರೇಮಿಯ ಜೊತೆಗೂಡಿ ಅನನ್ಯತೆ ಹೊಂದುತ್ತಾರೆ. ಇನ್ನು ಕೆಲವರು ತಮ್ಮೊಳಗಿರುವ ಕವಿತ್ವವನ್ನು ಹೊರತರಲು, ನಟನಾ ಕೌಶಲ್ಯವನ್ನು ಹೆಚ್ಚಿಸಿಕೊಳ್ಳಲು, ಸಾಹಿತ್ಯಕ್ಕೆ ಸಾಮಗ್ರಿ ಪಡೆಯಲು ಕೂಡುತ್ತಾರೆ ('ಇನ್ನೂ ಯಾಕ ಬರಲಿಲ್ಲವ್ವ ಹುಬ್ಬಳ್ಳಿಯಾವಾ...' ಹಾಡಿನ ಹಿನ್ನೆಲೆ ನೆನಪಿಸಿಕೊಳ್ಳಿ). ಒಟ್ಟಾರೆ ಇಲ್ಲಿ ನಿರ್ಧರಿಸುವ ಅಂಶ ಯಾವುದು? ಪ್ರಸ್ತುತ ಸಂಗಾತಿಯ ಜೊತೆ ಕಾಮಸುಖದ ಹೊರತಾಗಿ ಇನ್ನೇನು ಅನುಭವಿಸಬೇಕೆಂದಿದ್ದೇನೆ ಎನ್ನುವ ಅರಿವು ಇರುವುದು ಮುಖ್ಯವಾಗುತ್ತದೆ. ಇದಿಲ್ಲದಿದ್ದರೆ ಯಾರನ್ನು ಕೂಡಿದರೂ ತೃಪ್ತಿ ಹೊಂದಲಾಗದು.

**ಪ್ರಯೋಗ 30:** ಸಂಗಾತಿಯೊಡನೆ ಕುಳಿತುಕೊಂಡು ನಿಮ್ಮ ಕಲ್ಪನೆಗಳನ್ನು ಹಂಚಿಕೊಳ್ಳಿ (ಎಚ್ಚರಿಕೆ: ಇದಕ್ಕೆ ಸಾಕಷ್ಟು ಧೈರ್ಯ ಹಾಗೂ ಗಟ್ಟಿಸಂಬಂಧ ಇರಬೇಕು): ನನಗೆ ಎಂಥ ವ್ಯಕ್ತಿಯೊಡನೆ ಕಾಮಕೂಟ ನಡೆಸಲು ಇಷ್ಟ? (ಇಲ್ಲಿ ನಿರ್ದಿಷ್ಟ ವ್ಯಕ್ತಿ ಇರಬೇಕೆಂದಿಲ್ಲ.) ಇದರಲ್ಲಿ ಶಾರೀರಿಕ ತೃಪ್ತಿಯ ಹೊರತಾಗಿ ಬೇರೇನು ಅನುಭವಿಸಲು ಇಷ್ಟಪಡುತ್ತೇನೆ? ಈ ಅನುಭವವು ನನ್ನ ಬಗೆಗೆ ಏನು ತಿಳಿಸುತ್ತದೆ? ಈ ಅನುಭವವು ಸಂಗಾತಿಯೊಡನೆ ಕೂಡುವುದಕ್ಕಿಂತ ಹೇಗೆ ಭಿನ್ನವಾಗಿರುತ್ತದೆ?

**ವಾರದ ಪ್ರಶ್ನೆಗಳು:** ಈ ನಾಲ್ಕು ಕಂತುಗಳಲ್ಲಿ ಬರೆದಿರುವುದನ್ನು ಒಟ್ಟಾಗಿ ಓದಿಕೊಳ್ಳಿ: ನಿಮಗೇನು ಅನಿಸುತ್ತದೆ? ಕಾಮಕೂಟದ ಬಗೆಗಿನ ನಿಮ್ಮ ಮುಂಚಿನ ಅನಿಸಿಕೆಯು ಬದಲಾಗಿದೆಯೆ? ಹಾಗಿದ್ದಲ್ಲಿ ನನ್ನೊಡನೆ ಮುಕ್ತವಾಗಿ ಹಂಚಿಕೊಳ್ಳಬಹುದು. ಸಂಪರ್ಕಕ್ಕೆ: 8494933888;

Email: vinod.chebbi@gmail.com